Bapuji Educational Association (Regd.)

# Bapuji Institute of Engineering and Technology, Shamanur Road, Davanagere - 04

In association with

## Student Induction Program (SIP) - Phase II

Cordially invites you for the celebration of

# KARGIL VIJAY DIWAS

## Theme: Role of Engineers in Defence Sector Towards Nation Building

Date: 26th July 2023
Timings: 10:30 AM
Venue: S S Mallikarjun Cultural Centre



Chief Guest
**Capt. Naveen Nagappa Anaberu**
SENA MEDAL awardee
Superintendent Engineer, Ministry of Defence, Bangalore



**Dr. H B Aravind**
Principal, BIET



**Prof. Y Vrushabhendrappa**
Director, BIET

Conveners, Members of Science Forum & NSS
Staff & Students of BIET

# INVITATION

Bapuji Educational Association (R.)

## Bapuji Institute of Engineering and Technology

**Davangere-577004, Karnataka**

*In association with*

**IQAC, IIC, NSS, YRCW & Science Forum**

**Student Induction Program (SIP) - Phase II**

*Cordially invites you for the celebration of*

# KARGIL VIJAY DIWAS

***Theme : Role of Engineers in Defense Sector towards Nation Building***

***On Wednesday 26th July 2023***

Chief Guest :

**Capt. Naveen Nagappa Anaberu**
PARAM VIR CHAKRA awardee
Superintendent Engineer, Ministry of Defense, Bangalore

Guest of Honour :

**Prof. Y. VRUSHABHENDRAPPA**
Director, BIET, Davanagere

President :

**Dr. H. B. ARAVIND**
Principal, BIET, Davanagere

*On Wednesday, 26th July 2023 Time: 10:30 am*
*at S.S. Mallikarjuna Cultural Centre*

*All are Cordially Invited*

**Conveners, Members of Science Forum and NSS, Staff and Students of BIET**

Bapuji Educational Association (R.)

## Bapuji Institute of Engineering and Technology

**Davangere-577004, Karnataka**

*In association with*

**IQAC, IIC, NSS, YRCW & Science Forum**

**Student Induction Program (SIP) - Phase II**

# KARGIL VIJAY DIWAS

***Theme : Role of Engineers in Defense Sector towards Nation Building***

# INVITATION

Book-Post

To,

*On Wednesday, 26th July 2023 Time: 10:30 am*
*at S.S. Mallikarjuna Cultural Centre*

*All are Cordially Invited*

**Conveners, Members of Science Forum and NSS**
**Staff and Students of BIET**

# ಬಿಐಇಟಿಯಲ್ಲಿ ಇಂದು ಕಾರ್ಗಿಲ್ ವಿಜಯ ದಿವಸ್

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಿಂದ 'ಕಾರ್ಗಿಲ್ ವಿಜಯ ದಿವಸ್' ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30ಕ್ಕೆ ಎಸ್.ಎಸ್ ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾಲೇಜಿನ ಪ್ರಾಂಶುಪಾಲರಾದ ಡಾ. ಎಚ್.ಬಿ.ಅರವಿಂದ್ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬೆಂಗಳೂರಿನ ಕೇಂದ್ರ ರಕ್ಷಣಾ ಸಚಿವಾಲಯದ ಅಧೀಕ್ಷಕ ಇಂಜಿನಿ ಯರ್ ಮತ್ತು ಸೇನೆಯ ಶೌರ್ಯ ಪದಕ ಪುರಸ್ಕೃತ ಕ್ಯಾಪ್ಟನ್ ನವೀನ ನಾಗಪ್ಪ ಅಣಬೇರು ಮುಖ್ಯ ಅಥಿತಿಗಳಾಗಿ ಪಾಲ್ಗೊಂಡು ಉಪನ್ಯಾಸ ನೀಡಲಿದ್ದಾರೆ. ಅತಿಥಿಗಳಾಗಿ ಕಾಲೇಜಿನ ನಿರ್ದೇ ಶಕ ಪ್ರೊ. ವೈ. ವೃಷಭೇಂದ್ರಪ್ಪ ಪಾಲ್ಗೊಳ್ಳುವರು.

ಕಾರ್ಯಕ್ರಮದಲ್ಲಿ ಸಂಯೋಜಕರುಗಳಾದ ವಿಭಾಗ ಗಣಿತ ವಿಭಾಗದ ಮುಖ್ಯಸ್ಥ ಡಾ. ಕೆ. ಎಸ್. ಬಸವರಾಜಪ್ಪ, ಸಂಶೋಧನಾ ಮತ್ತು ಅಭಿವೃದ್ಧಿ ಡೀನ್ ಡಾ. ಎ.ಜಿ.ಶಂಕರಮೂರ್ತಿ ಉಪಸ್ಥಿತರಿರುವರು.

Vijayavani 26-07-2023

### ಕ್ಯಾಪ್ಟನ್ ನವೀನ್ ನಾಗಪ್ಪ ಅವರ ವೀರ ಗಾಥೆ । ಹೋರಾಟದ ಅನುಭವ ಬಿಚ್ಚಿಟ್ಟ ಯೋಧ

# ಕಾರ್ಗಿಲ್ ಯುದ್ಧ ಭೂಮಿಯಲ್ಲಿ ಗೆದ್ದು ಬಂದ ಕನ್ನಡಿಗ


ಕಾರ್ಗಿಲ್ ಯುದ್ಧ ಭೂಮಿಯಲ್ಲಿ ನವೀನ್ ನಾಗಪ್ಪ ಮತ್ತು ಇತರ ಯೋಧರು.

■ ರಮೇಶ ಜಹಗೀರದಾರ್ ದಾವಣಗೆರೆ

'ದುರ್ಗೆ ಮಾತಾ ಕೀ ಜೈ...' ಇದು 1999 ರಲ್ಲಿ ಕಾರ್ಗಿಲ್ ರಣಭೂಮಿಯಲ್ಲಿ ಕೇಳಿಬಂದ ಮಂತ್ರ. ಶತ್ರು ಪಾಳಯವನ್ನು ಸದೆಬಡಿಯಲು ಈ ಘೋಷಣೆ ನಮ್ಮ ಸೈನಿಕರಲ್ಲಿ ಯುದ್ಧೋತ್ಸಾಹವನ್ನು ತುಂಬಿತು. ಅಂದು ಯೋಧರಿಗೆ ಪ್ರೇರಣೆ ನೀಡಿ ತಂಡವನ್ನು ಮುನ್ನಡೆಸಿದವರು ಹೆಮ್ಮೆಯ ಕನ್ನಡಿಗ ಕ್ಯಾಪ್ಟನ್ ನವೀನ್ ನಾಗಪ್ಪ.


ಕ್ಯಾಪ್ಟನ್ ನವೀನ್ ನಾಗಪ್ಪ

ದೇಶಕ್ಕಾಗಿ ಜೀವ ಭಯ ತೊರೆದು ಹೋರಾಡಿದ ಈ ಧೀರ ಗ್ರೆನೇಡ್ ದಾಳಿಗೆ ಒಳಗಾದವರು. ಕಾಲುಗಳಿಗೆ ಗಂಭೀರ ಗಾಯಗಳಾಗಿ, 21 ತಿಂಗಳು ಆಸ್ಪತ್ರೆಯಲ್ಲಿದ್ದು ಬಂದವರು. ಇವರ ವೀರಗಾಥೆ ಇಂದಿನ ಯುವ ಜನಾಂಗಕ್ಕೆ ಆದರ್ಶಪ್ರಾಯವಾಗಿದೆ.

ಮೂಲತಃ ಹುಬ್ಬಳ್ಳಿಯವರು. ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ವ್ಯಾಸಂಗವನ್ನು ಅಲ್ಲೇ ಮಾಡಿ ದಾವಣಗೆರೆಯ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ 1996 ರಲ್ಲಿ ಬಿ.ಇ ಪದವಿ ಪಡೆದವರು. ಮುಂದೆ ಅವರು ಉನ್ನತ ಶಿಕ್ಷಣಕ್ಕೆ ಹೋಗಬಹುದಿತ್ತು, ಅಥವಾ ಯಾವುದಾದರೂ ಕೆಲಸಕ್ಕೆ ಸೇರಿಕೊಳ್ಳಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ.

ಭಾರತೀಯ ಸೇನೆಯನ್ನು ಸೇರಬೇಕು ಎನ್ನುವ ಮಹದಾಸೆಯಿಂದ ಸರ್ವೀಸ್ ಸೆಲೆಕ್ಷನ್ ಬೋರ್ಡ್‌ಗೆ ಅರ್ಜಿ ಸಲ್ಲಿಸಿ ಆಯ್ಕೆಯೂ ಆದರು. ಡೆಹರಾಡೂನ್‌ನ ಇಂಡಿಯನ್ ಮಿಲಿಟರಿ ಅಕಾಡೆಮಿಯಲ್ಲಿ ಒಂದು ವರ್ಷದ ತರಬೇತಿಯ ನಂತರ ಲೆಫ್ಟಿನೆಂಟ್ ಅಧಿಕಾರಿಯಾಗಿ 1998ರ ಡಿಸೆಂಬರ್‌ನಲ್ಲಿ ನೇಮಕವಾದರು.

ಜಮ್ಮು ಮತ್ತು ಕಾಶ್ಮೀರ 13ನೇ ಬಟಾಲಿಯನ್‌ನ ಸೋಪುರ್ ಯೂನಿಟ್‌ಗೆ 1999ರ ಜನವರಿಯಲ್ಲಿ ಸೇರ್ಪಡೆಯಾದರು. ಅದಾದ ಕೇವಲ 6 ತಿಂಗಳಲ್ಲಿ ಕಾರ್ಗಿಲ್ ಯುದ್ಧ ಆರಂಭವಾಗಿದ್ದರಿಂದ ಗಡಿ ಭಾಗಕ್ಕೆ ತೆರಳಬೇಕಾಯಿತು.

ಅವರ ಮೊದಲ ಟಾಸ್ಕ್ 'ಪಾಯಿಂಟ್ 5140' ಆಗಿತ್ತು. ಆ ಬೆಟ್ಟದಲ್ಲಿದ್ದ ಶತ್ರುಗಳನ್ನು ನಾಶ ಮಾಡುವ ಗುರಿ. ಕ್ಯಾಪ್ಟನ್ ವಿಕ್ರಮ್ ಬತ್ರಾ, ಕ್ಯಾಪ್ಟನ್ ಸಂಜೀವ್ ಸಿಂಗ್ ಜಾಂಬ್ವಾಲ್ ನೇತೃತ್ವದಲ್ಲಿ ಜೂನ್ 19ರಂದು ದಾಳಿ ಆರಂಭವಾಯಿತು. ಆ ಟಾಸ್ಕ್‌ನಲ್ಲಿ ನವೀನ್ ನಾಗಪ್ಪ ರಿಸರ್ವ್‌ನಲ್ಲಿದ್ದರು (ಅಗತ್ಯ ಬಿದ್ದಾಗ ಹೋಗಬೇಕಿತ್ತು).

ಬಂಕರ್‌ಗಳನ್ನು ನಾಶ ಮಾಡುತ್ತ ಸಾಗಿದ ನಮ್ಮ ಯೋಧರು ಕೇವಲ 48 ಗಂಟೆಗಳಲ್ಲಿ ಆ ಬೆಟ್ಟದ ಮೇಲೆ ಭಾರತದ ಬಾವುಟ ಹಾರಿಸಿ 'ಏ ದಿಲ್ ಮಾಂಗೆ ಮೋರ್' ಎಂದು ಯಶಸ್ಸಿನ ಚಿಹ್ನೆ ತೋರಿದರು. ಮೊದಲ ಗೆಲುವು ಭಾರತೀಯ ಪಾಳಯದಲ್ಲಿ ಹಬ್ಬದ ವಾತಾವರಣ ಸೃಷ್ಟಿಸಿತ್ತು.

ಕೆಲವೇ ದಿನಗಳಲ್ಲಿ ಮತ್ತೊಂದು ಸಂದೇಶ ಬರುತ್ತದೆ. ಈ ಬಾರಿ 'ಪಾಯಿಂಟ್ 4875' ಮೇಲೆ ಅಟ್ಯಾಕ್ ಮಾಡಬೇಕಿತ್ತು. ಇದೇ ಸೂಕ್ತ ಸಂದರ್ಭವೆಂದುಕೊಂಡ ನವೀನ್, ಕಮ್ಯಾಂಡಿಂಗ್ ಆಫೀಸರ್ ಬಳಿ ಹೋಗಿ ತಮಗೊಂದು ಅವಕಾಶ ನೀಡುವಂತೆ ಮನವಿ ಮಾಡಿದರು. ಮೊದಲು ಒಪ್ಪದ ಆ ಅಧಿಕಾರಿ, ಇವರ ಆಸಕ್ತಿಯನ್ನು ಗಮನಿಸಿ ಕೊನೆಗೂ ಅನುಮತಿ ನೀಡುತ್ತಾರೆ.

## ಗ್ರೆನೇಡ್ ದಾಳಿಯಿಂದ ಕಾಲು ಜೋತಾಡುತ್ತಿತ್ತು

ಜುಲೈ 4, 1999. ನವೀನ್ ನಾಗಪ್ಪ 120 ಜನರ ತಂಡದ ನೇತೃತ್ವ ವಹಿಸಿಕೊಂಡು ಅಂದು ಕತ್ತಲಾಗುತ್ತಿದ್ದಂತೆ 'ದುರ್ಗೆ ಮಾತಾ ಕೀ ಜೈ' ಎಂದು ಘೋಷಣೆ ಕೂಗಿ ದಾಳಿ ಆರಂಭಿಸುತ್ತಾರೆ. ಜುಲೈ 5ರ ನಸುಕಿನಲ್ಲಿ 3 ಬಂಕರ್‌ಗಳು ಕಾಣಿಸುತ್ತವೆ. ತಮ್ಮ ತಂಡದಲ್ಲಿ 10 ಜನರನ್ನು ಆಯ್ಕೆ ಮಾಡಿಕೊಂಡ ನವೀನ್ 3 ತಂಡಗಳನ್ನು ರಚಿಸಿ ಒಂದನ್ನು ತಾವೇ ಲೀಡ್ ಮಾಡುತ್ತಾರೆ.

25ನೇ ವರ್ಷದ ಸಂಭ್ರಮಾಚರಣೆ ಕಾರ್ಗಿಲ್ ವಿಜಯ ದಿವಸ್

ತೆವಳುತ್ತ ಸಾಗಿ ಬಂಕರ್ ಸಮೀಪಿಸುತ್ತಿದ್ದಂತೆ ಹ್ಯಾಂಡ್ ಗ್ರೆನೇಡ್ ಎಸೆದು ಗುಂಡು ಹಾರಿಸತೊಡಗಿದರು. ಆ ಬಂಕರ್‌ಗಳನ್ನು ವಶಪಡಿಸಿಕೊಂಡಿದ್ದು ಗೆಲುವಿನ ಮೊದಲ ಹೆಜ್ಜೆಯಾಗಿತ್ತು. ಅಷ್ಟು ಹೊತ್ತಿಗೆ ಮೇಲಿನ ಬಂಕರ್‌ಗಳಿಂದ ಶತ್ರುಗಳು ಹಾರಿಸಿದ ಗುಂಡಿಗೆ ಶ್ಯಾಮ್ ಸಿಂಗ್ ಎಂಬ ಯೋಧ ಹುತಾತ್ಮರಾದರು. ದಾಳಿ ಮುಂದುವರಿಯಿತು. ರೈಫಲ್‌ಮನ್ ಸಂಜಯ ಕುಮಾರ್ ಅವರಿಗೆ 2 ಗುಂಡುಗಳು ತಗುಲಿದವು.

'ಬೆಟ್ಟದ ತುದಿಯಲ್ಲಿದ್ದ ಕೊನೆಯ ಬಂಕರ್ ನಮ್ಮ ಟಾರ್ಗೆಟ್ ಆಯಿತು. ಕ್ಯಾಪ್ಟನ್ ವಿಕ್ರಮ್ ಬತ್ರಾ ಮತ್ತು ನಾನು ಆ ಬಂಕರ್‌ನತ್ತ ನುಗ್ಗುತ್ತಿದ್ದೆವು. ಜುಲೈ 7ರ ಬೆಳಗಿನ ಜಾವ ಶತ್ರುಗಳು ನನ್ನತ್ತ ಹ್ಯಾಂಡ್ ಗ್ರೆನೇಡ್ ಎಸೆದರು. ಸ್ಫೋಟಗೊಳ್ಳುವ ಮೊದಲು ಅದನ್ನು ಎತ್ತಿ ಎಸೆದೆ. ಅದು ಬಂಡೆಗಲ್ಲಿಗೆ ತಗುಲಿ ನನ್ನ ಬಳಿಗೇ ಉರುಳಿ ಬಂತು. ಅಪಾಯವನ್ನು ಅರಿತು ಬಂಡೆಗಲ್ಲಿನ ಸಂದಿಯೊಳಗೆ ರಕ್ಷಣೆ ಪಡೆಯಲು ಪ್ರಯತ್ನಿಸಿದೆ. ಆದರೆ ನನ್ನ ಕಾಲುಗಳು ಮಾತ್ರ ಹೊರಗೇ ಇದ್ದವು. ಗ್ರೆನೇಡ್ ಸ್ಫೋಟದಲ್ಲಿ ನನ್ನ ಕಾಲುಗಳಿಗೆ ಗಂಭೀರ ಗಾಯಗಳಾದವು' ಎಂದು ನವೀನ್, ಘಟನೆಯನ್ನು ವಿವರಿಸಿದರು.

ಗಾಯಗೊಂಡಿದ್ದ ನನ್ನನ್ನು ವಿಕ್ರಂ ಬತ್ರಾ ಸ್ವಲ್ಪ ದೂರ ತಂದು ಬಿಟ್ಟರು. ಸ್ಫೋಟದ ತೀವ್ರತೆಗೆ ನನ್ನ ಒಂದು ಕಾಲು ಜೋತಾಡತೊಡಗಿತು. ಜವಾನನೊಬ್ಬ ನನ್ನನ್ನು ಹೊತ್ತುಕೊಂಡು ಬಂದ. ನಂತರ ಸ್ಟ್ರೆಚರ್‌ನಲ್ಲಿ ನನ್ನನ್ನು ಕೆಳಗೆ ಕರೆದುಕೊಂಡು ಬಂದರು. ಅಲ್ಲಿಂದ ಶ್ರೀನಗರಕ್ಕೆ, ನಂತರ ದೆಹಲಿಯ ಆಸ್ಪತ್ರೆಗೆ ದಾಖಲಿಸಿದರು ಎನ್ನುತ್ತಾರವರು.

ಬರೋಬ್ಬರಿ 21 ತಿಂಗಳ ಚಿಕಿತ್ಸೆಯ ಬಳಿಕ ನವೀನ್ ನಾಗಪ್ಪ ಆಸ್ಪತ್ರೆಯಿಂದ ಹೊರ ಬಂದರು. ವೈದ್ಯಕೀಯ ಕಾರಣಕ್ಕೆ ಅವರು ಸೇನೆಯಿಂದಲೂ ನಿರ್ಗಮಿಸಬೇಕಾಯಿತು. ಪ್ರಸ್ತುತ ನವೀನ್ ನಾಗಪ್ಪ ರಕ್ಷಣಾ ಸಚಿವಾಲಯದಲ್ಲಿ ಅಧೀಕ್ಷಕ ಇಂಜಿನಿಯರ್ ಆಗಿ ಬೆಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

# ನಾಯಕತ್ವದ ಮನೋವೃತ್ತಿ ಇದ್ದವರಿಗೆ ಮಾತ್ರ ಸೈನಿಕ ವೃತ್ತಿ

## ರಕ್ಷಣಾ ಸಚಿವಾಲಯದ ಅಧೀಕ್ಷಕ ಇಂಜಿನಿಯರ್ ಕ್ಯಾಪ್ಟನ್ ನವೀನ್ ನಾಗಪ್ಪ ಅಣಬೇರು



ದಾವಣಗೆರೆ, ಜು. 26 - ಕಂಠಪಾಠ ಮಾಡಿದ ಪಾಠಗಳಿಂದ ಸೈನಿಕ ಅಧಿಕಾರಿಗಳಾಗಲು ಸಾಧ್ಯವಿಲ್ಲ. ಸೈನಿಕ ಅಧಿಕಾರಿಗಳಾಗಲು ಬಯಸುವವರಿಗೆ ನಾಯಕತ್ವದ ಗುಣ ಹಾಗೂ ಕ್ಷಣಾರ್ಧದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಮನೋಭಾವ ಬೇಕು ಎಂದು ರಕ್ಷಣಾ ಸಚಿವಾಲಯದ ಅಧೀಕ್ಷಕ ಇಂಜಿನಿಯರ್ ಕ್ಯಾಪ್ಟನ್ ನವೀನ್ ನಾಗಪ್ಪ ಅಣಬೇರು ಹೇಳಿದರು.

ನಗರದ ಬಿ.ಐ.ಇ.ಟಿ.ಯಲ್ಲಿ ಇಂದು ಆಯೋಜಿಸಲಾಗಿದ್ದ ಕಾರ್ಗಿಲ್ ವಿಜಯ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಸೈನ್ಯದ ಅಧಿಕಾರಿಯಾಗಿ ಆಯ್ಕೆಯಾಗಲು 'ಸೇವೆಗಳ ಆಯ್ಕೆ ಮಂಡಳಿ' (ಎಸ್.ಎಸ್.ಬಿ.) ಪರೀಕ್ಷೆ ನಡೆಸಲಾಗುತ್ತದೆ. ತಮಾಷೆಯಾಗಿ ಇದನ್ನು 'ಸೇವೆಗಳ ತಿರಸ್ಕಾರ ಮಂಡಳಿ' ಎಂದೂ ಕರೆಯಲಾಗುತ್ತದೆ. ಏಕೆಂದರೆ ಅರ್ಜಿ ಹಾಕುವ ಸಾಕಷ್ಟು ಜನರು ತಿರಸ್ಕೃತರಾಗುತ್ತಾರೆ ಎಂದು ನವೀನ್ ನಾಗಪ್ಪ ತಿಳಿಸಿದರು.

ಸೈನಿಕ ಅಧಿಕಾರಿಗಳನ್ನು ಆಯ್ಕೆ ಮಾಡುವಾಗ ನಾಯಕತ್ವ ಗುಣ ಹಾಗೂ ಕ್ಷಣಾರ್ಧ ದಲ್ಲಿ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಪರಿಗಣಿಸಲಾಗುತ್ತದೆ. ಏಕೆಂದರೆ, ಯುದ್ಧ ಭೂಮಿಯಲ್ಲಿ ಗುಂಡು - ಬಾಂಬುಗಳು ಸಿಡಿಯುವಾಗ ಗಿಳಿಪಾಠಗಳು ಉಪಯೋಗಕ್ಕೆ ಬರುವುದಿಲ್ಲ ಎಂದವರು ಹೇಳಿದರು.

ಸೈನ್ಯದ ಅಧಿಕಾರಿ ನೇಮಕದ ಸಂದರ್ಭದಲ್ಲಿ ಮನೋವೈದ್ಯರೂ ಇರುತ್ತಾರೆ. ಇವರು ಅಭ್ಯರ್ಥಿಗಳು ಕ್ಷಣಮಾತ್ರದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳ ಬಗ್ಗೆ ಹೆಚ್ಚು ಗಮನ ಹರಿಸುತ್ತಾರೆಯೇ ಹೊರತು, ಟ್ರೈನಿಂಗ್ ಸಂಸ್ಥೆಗಳಲ್ಲಿ ಕಲಿತು ಬಂದು ನೀಡುವ ಉತ್ತರಗಳಿಗೆ ಮಣೆ ಹಾಕುವುದಿಲ್ಲ ಎಂದರು.

24 ವರ್ಷಗಳ ಹಿಂದೆ ಸಣ್ಣ ವಯಸ್ಸಿನಲ್ಲಿ ಕಾರ್ಗಿಲ್ ಯುದ್ಧದಲ್ಲಿ ಭಾಗಿಯಾದ ತಮ್ಮ ಅನುಭವ ಹಂಚಿಕೊಂಡ ಅವರು, ಯುದ್ಧದ ಸಂದರ್ಭದಲ್ಲಿ ತೀವ್ರವಾಗಿ ಗಾಯಗೊಂಡು ಎಂಟು ಶಸ್ತ್ರಚಿಕಿತ್ಸೆಗೆ ಒಳಗಾಗಿ 21 ತಿಂಗಳ ಕಾಲ ಆಸ್ಪತ್ರೆಯಲ್ಲಿರಬೇಕಾಯಿತು ಎಂದರು.

ನನ್ನ ತಂಡದ ಸಾಹಸದಿಂದ ಕಾರ್ಗಿಲ್‌ನ ಪಾಯಿಂಟ್ 4875 ಬೆಟ್ಟದ ಮೇಲೆ ತ್ರಿವರ್ಣ ಧ್ವಜ ಹಾರುವಂತಾಯಿತು. ಆ ಸಾಹಸಗಾಥೆ ಜೀವನದಲ್ಲಿ ಸಾರ್ಥಕ ಭಾವ ತರುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಭಾರತ ದೇಶ ಮುಂದುವರೆಯುವುದನ್ನು ಸಹಿಸದವರು ದೇಶ ಅಸ್ಥಿರಗೊಳಿಸುವ ಪ್ರಯತ್ನ ನಡೆಸುತ್ತಿದ್ದಾರೆ. ಇಂತಹ ಪ್ರಯತ್ನಗಳ ಬಗ್ಗೆ ಸತರ್ಕವಾಗಿರಬೇಕು ಎಂದು ಹೇಳಿದರು.

ವೇದಿಕೆಯ ಮೇಲೆ ಕಾಲೇಜಿನ ಪ್ರಾಂಶುಪಾಲ ಹೆಚ್.ಬಿ. ಅರವಿಂದ, ಉಪನ್ಯಾಸಕರಾದ ಕೆ.ಎಸ್. ಬಸವರಾಜಪ್ಪ, ಶಂಕರಮೂರ್ತಿ, ಮಲ್ಲಿಕಾರ್ಜುನ ಉಪಸ್ಥಿತರಿದ್ದರು.

ಅಂಕಿತ ಪ್ರಾರ್ಥಿಸಿದರು. ಸ್ಫೂರ್ತಿ ಸ್ವಾಗತಿಸಿದರೆ, ಮಧು ದೇಶಭಕ್ತಿ ಗೀತೆ ಹಾಡಿದರು.

### ತ್ಯಾಗ-ಬಲಿದಾನಗಳಿಗೆ ನಾವು ಅರ್ಹರೇ?

ಕಾರ್ಗಿಲ್ ಯುದ್ಧದ ವೇಳೆ 526 ಸೈನಿಕರು ಹುತಾತ್ಮರಾದರು. 1,300 ಸೈನಿಕರು ತೀವ್ರವಾಗಿ ಗಾಯಗೊಂಡು ಅಂಗಹೀನರಾದರು. ಅವರ ಈ ತ್ಯಾಗ ಬಲಿದಾನಗಳಿಗೆ ನಾವು ಅರ್ಹರೇ?

ಈ ಪ್ರಶ್ನೆ ನನಗೆ ಆಗಾಗ ಕಾಡುತ್ತಿರುತ್ತದೆ. ನೀವೂ ಈ ಪ್ರಶ್ನೆ ಕೇಳಿಕೊಳ್ಳಿ, ನಿಮ್ಮ ಉತ್ತರವೇ ನನ್ನದೂ ಆಗಿದೆ ಎಂದು ರಕ್ಷಣಾ ಸಚಿವಾಲಯದ ಅಧೀಕ್ಷಕ ಇಂಜಿನಿಯರ್ ಕ್ಯಾಪ್ಟನ್ ನವೀನ್ ನಾಗಪ್ಪ ಅಣಬೇರು ಮಾರ್ಮಿಕವಾಗಿ ತಿಳಿಸಿದರು.

ಸೈನಿಕ ಅಧಿಕಾರಿಯಾದ ಕೆಲವೇ ತಿಂಗಳಲ್ಲಿ ಕಾರ್ಗಿಲ್ ಯುದ್ಧ ಎದುರಾದ ಸಂದರ್ಭ ಹಾಗೂ ಅದರಲ್ಲಿ ನಡೆದ ಹೋರಾಟದ ಬಗ್ಗೆ ನವೀನ್ ನಾಗಪ್ಪ ವಿವರವಾಗಿ ತಿಳಿಸಿದರು.

ಸೈನಿಕ ಅಧಿಕಾರಿಗಳಿಗಾಗಿ ಬಡ್ಡಿ (ಸಹಾಯಕ) ಎಂಬ ವ್ಯವಸ್ಥೆ ಇದೆ. ಸೈನಿಕ ಅಧಿಕಾರಿಗಳಿಗೆ ನೆರವಾಗಲು ಒಬ್ಬರನ್ನು ನೇಮಿಸಲಾಗುತ್ತದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಸೈನಿಕ ಶಾಮ್ ಸಿಂಗ್ ನನಗೆ ಬಡ್ಡಿ ಆಗಿದ್ದರು. ಪಾಯಿಂಟ್ 4875 ಬೆಟ್ಟವನ್ನು ಪಾಕ್ ಸೈನ್ಯ ಅತಿಕ್ರಮಿಸಿಕೊಂಡಿತ್ತು. ಬೆಟ್ಟ ಮರು ವಶಪಡಿಸಿಕೊಳ್ಳುವ ಹೋರಾಟದಲ್ಲಿ ಅನಾರೋಗ್ಯದ ನಡುವೆಯೂ ಶಾಮ್ ಸಿಂಗ್ ಹಠಕ್ಕೆ ಬಿದ್ದು ನನಗೆ ಜೊತೆಯಾಗಿದ್ದರು.

ಇದೇ ಹೋರಾಟದಲ್ಲಿ ಸೈನಿಕ ಅಧಿಕಾರಿ ಕ್ಯಾಪ್ಟನ್ ವಿಕ್ರಮ್ ಬಾತ್ರಾ ಅವರು ಭಾಗಿಯಾಗಿದ್ದರು. ಮೊದಲ ದಿನದ ಹೋರಾಟದಲ್ಲಿ ಶಾಮ್ ಸಿಂಗ್ ಹುತಾತ್ಮರಾದರು.

ಹೋರಾಟದ ನಾಲ್ಕನೇ ದಿನ ನಾನು ಗ್ರೆನೇಡ್ ದಾಳಿಗೆ ಸಿಲುಕಿ ತೀವ್ರವಾಗಿ ಗಾಯಗೊಂಡೆ. ಬಾತ್ರಾ ಅವರು ನನ್ನ ರಕ್ಷಣೆಗೆ ನೆರವಾಗಿ ಹೋರಾಟ ಮುಂದುವರೆಸಿದರು. ಕ್ಯಾಪ್ಟನ್ ಬಾತ್ರ ನೇತೃತ್ವದಲ್ಲಿ ಈ ಬೆಟ್ಟವನ್ನು ವಶಪಡಿಸಿಕೊಳ್ಳಲಾಯಿತು. ಆದರೆ, ಬಾತ್ರಾ ಹುತಾತ್ಮರಾದರು. ಮರಣೋತ್ತರವಾಗಿ ಅವರಿಗೆ ಪರಮವೀರ ಚಕ್ರ ಪ್ರಶಸ್ತಿ ದೊರೆಯಿತು. ಅವರ ಜೀವನವನ್ನು ಆಧರಿಸಿ 'ಶೇರ್ ಶಾ' ಎಂಬ ಚಿತ್ರ ನಿರ್ಮಿಸಲಾಗಿದೆ ಎಂದು ನವೀನ್ ನಾಗಪ್ಪ ಹೇಳಿದರು.

# ಕಾರ್ಗಿಲ್ ಯುದ್ಧದ ರೋಚಕತೆ ಬಿಚ್ಚಿಟ್ಟ ಕ್ಯಾಪ್ಟನ್

vijayakarnataka
27-07-2023

■ **ವಿಕ ಸುದ್ದಿಲೋಕ** ದಾವಣಗೆರೆ

ನಗರದ ಬಿಐಇಟಿ ಕಾಲೇಜಿನಲ್ಲಿ ಬುಧವಾರ ಏರ್ಪಡಿಸಿದ್ದ 'ಕಾರ್ಗಿಲ್ ವಿಜಯ ದಿವಸ್' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕ್ಯಾಪ್ಟನ್ ನವೀನ್ ನಾಗಪ್ಪ ಅಣಬೇರು ಅವರು, 1999ರಲ್ಲಿ ನಡೆದ ಕಾರ್ಗಿಲ್ ಯುದ್ಧದಲ್ಲಿ ಭಾರತೀಯ ಸೈನಿಕರು, ಶತ್ರು ಪಾಳೆಯವಾಗಿದ್ದ ಪಾಕಿಸ್ತಾನದ ಸೈನಿಕರ ಮೇಲೆ ಎರಗಿ ಜಯಭೇರಿ ಬಾರಿಸಿದ ರೋಚಕತೆಯನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು.

**ಕಾರ್ಗಿಲ್ ವಿಜಯ ದಿವಸ್ ಕಾರ್ಯಕ್ರಮ**

ಕಾರ್ಯಕ್ರಮದಲ್ಲಿ ಕ್ಯಾಪ್ಟನ್ ನವೀನ್ ಮಾತನಾಡಿ, ''ಭಾರತೀಯ ಸೇನೆಗೆ ಸೇರಬೇಕೆಂಬ ಮಹದಾಸೆಯೊಂದಿಗೆ ಸರ್ವೀಸ್ ಸೆಲೆಕ್ಷನ್ ಬೋರ್ಡ್‌ಗೆ ಅರ್ಜಿ ಸಲ್ಲಿಸಿ, ಲೆಫ್ಟಿನೆಂಟ್ ಅಧಿಕಾರಿಯಾಗಿ 1998ರ ಡಿಸೆಂಬರ್‌ನಲ್ಲಿ ನೇಮಕವಾದೆ. ಜಮ್ಮು ಮತ್ತು ಕಾಶ್ಮೀರದ 13ನೇ ಬಟಾಲಿಯನ್‌ನ ಸೋಪುರ್ ಯೂನಿಟ್‌ಗೆ 1999ರ ಜನವರಿಯಲ್ಲಿ ಸೇರ್ಪಡೆಯಾದೆ. ಇದಾದ 6 ತಿಂಗಳಲ್ಲಿ ಕಾರ್ಗಿಲ್ ಯುದ್ಧ ಆರಂಭವಾಯಿತು'' ಎಂದು ಹೇಳಿದರು.

''ಪಾಯಿಂಟ್ 5140 ಬೆಟ್ಟ ಮರು ವಶಪಡಿಸಿಕೊಳ್ಳುವುದು ನಮಗೆ ಮೊದಲ ಸವಾಲಾಗಿತ್ತು. ಆ ಬೆಟ್ಟದಲ್ಲಿದ್ದ ಶತ್ರುಗಳನ್ನು ನಾಶ ಮಾಡುವ ಗುರಿಯೊಂದಿಗೆ ಕ್ಯಾಪ್ಟನ್ ವಿಕ್ರಮ್ ಬತ್ರಾ, ಕ್ಯಾಪ್ಟನ್ ಸಂಜೀವ್ ಸಿಂಗ್ ಜಾಂಬ್ವಾಲ್ ನೇತೃತ್ವದಲ್ಲಿ ಜೂನ್ 19ರಂದು ದಾಳಿ ಆರಂಭವಾಯಿತು. ಬಂಕರ್‌ಗಳನ್ನು ನಾಶ ಮಾಡುತ್ತ ಸಾಗಿದ ನಮ್ಮ ಯೋಧರು, ಕೇವಲ 48 ಗಂಟೆಗಳಲ್ಲಿ ಆ ಬೆಟ್ಟದ ಮೇಲೆ ಭಾರತದ ಬಾವುಟ ಹಾರಿಸಿ 'ಏ ದಿಲ್ ಮಾಂಗೆ ಮೋರ್' ಎಂಬ ಯಶಸ್ಸಿನ ಚಿಹ್ನೆ ತೋರಿದರು'' ಎಂದು ಸ್ಮರಿಸಿದರು.

''ನಂತರ ಪಾಯಿಂಟ್ 4875 ವಶಪಡಿಸಿಕೊಳ್ಳುವ ಜವಾಬ್ದಾರಿ ನನ್ನ ತಂಡಕ್ಕೆ ದೊರೆಯಿತು. 1999ರ ಜುಲೈ 4ರಂದು 120 ಜನರ ತಂಡ ನನ್ನ ನೇತೃತ್ವದಲ್ಲಿ 'ದುರ್ಗಾ ಮಾತಾ ಕೀ ಜೈ' ಎಂಬ ಘೋಷಣೆಯೊಂದಿಗೆ ದಾಳಿ ಆರಂಭಿಸಿ, ಮೊದಲ ದಿನ ಮೂರು ಬಂಕರ್ ವಶಪಡಿಸಿಕೊಂಡೆವು. ಆದರೆ, ಪಾಕಿಸ್ತಾನಿ ಸೈನಿಕರ ಗುಂಡಿಗೆ ನನ್ನ ಸಹಾಯಕ ಆಗಿದ್ದ ಶ್ಯಾಮ್ ಸಿಂಗ್ ಹುತಾತ್ಮರಾದರು. ಕಾರ್ಯಾಚರಣೆ ಮುಂದುವರಿಸಿ ಕೊನೆಯ ಬಂಕರ್ ಬಳಿ ಬಂದೆವು. ಕ್ಯಾಪ್ಟನ್ ವಿಕ್ರಮ್ ಬಾತ್ರಾ ಕಾರ್ಯಾಚರಣೆಯಲ್ಲಿ ಜತೆಯಾದರು. ಜುಲೈ 7ರ ಬೆಳಗ್ಗೆ ಶತ್ರುಗಳು ನನತ್ತ ಹ್ಯಾಂಡ್ ಗ್ರೆನೇಡ್ ಎಸೆದರು. ಆ ದಾಳಿಗೆ ಸಿಲುಕಿ ನನ್ನ ಕಾಲುಗಳಿಗೆ ಗಂಭೀರ ಗಾಯಗಳಾದವು. ಬಳಿಕ ದಿಲ್ಲಿಯ ಆಸ್ಪತ್ರೆಗೆ ದಾಖಲಿಸಲಾಯಿತು. ಆ ಹಾದಿಯಲ್ಲಿದ್ದಾಗ ನನ್ನ ತಂಡ ಪಾಯಿಂಟ್ 4875 ವಶಪಡಿಸಿಕೊಂಡ ಸಂತಸದ ಸುದ್ದಿ ತಿಳಿಯಿತು. ಆದರೆ, ಇದೇ ಕಾರ್ಯಾಚರಣೆಯಲ್ಲಿ ಕ್ಯಾಪ್ಟನ್ ವಿಕ್ರಮ್ ಬಾತ್ರಾ ಅವರು ಹುತಾತ್ಮರಾಗಿದ್ದು ನನಗೆ ಅತೀವ ನೋವು ತಂದಿತು'' ಎಂದು ಭಾವುಕರಾದರು.



ದಾವಣಗೆರೆ ಬಿಐಇಟಿ ಕಾಲೇಜಿನಲ್ಲಿ ಬುಧವಾರ ನಡೆದ 'ಕಾರ್ಗಿಲ್ ವಿಜಯ ದಿವಸ್' ಕಾರ್ಯಕ್ರಮದಲ್ಲಿ ಕ್ಯಾಪ್ಟನ್ ನವೀನ್ ನಾಗಪ್ಪ ಅಣಬೇರು ಅವರನ್ನು ಸನ್ಮಾನಿಸಲಾಯಿತು.

ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ.ವೈ. ವೃಷಬೇಂದ್ರಪ್ಪ, ಕಾಲೇಜಿನ ಪ್ರಾಂಶುಪಾಲ ಡಾ. ಎಚ್. ಬಿ. ಅರವಿಂದ, ಉಪನ್ಯಾಸಕರಾದ ಕೆ.ಎಸ್. ಬಸವರಾಜಪ್ಪ, ಶಂಕರಮೂರ್ತಿ, ಮಲ್ಲಿಕಾರ್ಜುನ ಇದ್ದರು. ಅಂಕಿತ ಪ್ರಾರ್ಥಿಸಿದರು. ಸ್ಫೂರ್ತಿ ಸ್ವಾಗತಿಸಿದರು. ಮಧು ದೇಶಭಕ್ತಿ ಗೀತೆ ಹಾಡಿದರು.

# ಯೋಧರ ಪರಿಶ್ರಮ-ಗೆಲುವಿನ ತುಡಿತದಿಂದ ಜಯ ಸಾಧಿ

Udayavani 27-07-2023

ದಾವಣಗೆರೆ: ಯೋಧರ ಅಪಾರ ಪರಿಶ್ರಮ ಹಾಗೂ ಗೆಲುವ ಸಾಧಿಸುವ ಛಲವೇ ಕಾರ್ಗಿಲ್ ಯುದ್ಧ ದಲ್ಲಿ ಗೆಲುವಿಗೆ ಕಾರಣವಾಯಿತು ಎಂದು ಬೆಂಗಳೂರಿನ ಕೇಂದ್ರ ರಕ್ಷಣಾ ಸಚಿವಾಲಯದ ಅಧೀಕ್ಷಕ ಇಂಜಿನಿಯರ್ ಮತ್ತು ಸೇನೆಯ ಶೌರ್ಯ ಪದಕ ಪುರಸ್ಕೃತ ಕ್ಯಾ। ನವೀನ್ ನಾಗಪ್ಪ ಹೇಳಿದರು.

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಎಸ್. ಎಸ್ ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಗಿಲ್ ವಿಜಯ ದಿವಸ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕಾರ್ಗಿಲ್ ಯುದ್ಧದಲ್ಲಿನ ಅನೇಕ ಸವಾಲುಗಳನ್ನು ಅತ್ಯಂತ ಸಮರ್ಥವಾಗಿ ಮೆಟ್ಟಿ ನಿಂತ ಯೋಧರ ಪರಾಕ್ರಮದ ಮುಂದೆ ಪಾಕಿಸ್ತಾನ ಸೋತು ಸುಣ್ಣವಾಯಿತು. ಸ್ವತಂತ್ರ ಭಾರತದಲ್ಲಿ ಕಾರ್ಗಿಲ್ ಯುದ್ಧದ ಗೆಲುವು ಅವಿಸ್ಮರಣೀಯ ಎಂದರು.

ನನಗೆ ಭಾರತೀಯ ಸೇನೆ ಸೇರಬೇಕು ಎಂಬ ಮಹತ್ತರ ಅಭಿಲಾಷೆ ಇತ್ತು. ಸರ್ವಿಸ್ ಸೆಲೆಕ್ಷನ್ ಬೋರ್ಡ್‌ಗೆ ಅರ್ಜಿ ಸಲ್ಲಿಸಿ ಕೊನೆಗೂ ಆಯ್ಕೆಯಾದೆ. ಜಮ್ಮು ಮತ್ತು ಕಾಶ್ಮೀರ 13ನೇ ಬೆಟಾಲಿಯನ್‌ನ ಸೋಪುರ್ ಯುನಿಟ್ ಗೆ ನಾನು ಸೇರ್ಪಡೆಯಾದ ವೇಳೆಗಾಗಲೇ ಕಾರ್ಗಿಲ್ ಯುದ್ಧ

ಆರಂಭವಾಗಿತ್ತು. ದೇಶದ ಗಡಿ ಭಾಗಕ್ಕೆ ತೆರಳಬೇಕಾಗಿತ್ತು. ಪಾಯಿಂಟ್ 5140 ಬೆಟ್ಟದಲ್ಲಿ ಶತ್ರುಗಳನ್ನು ನಾಶ ಮಾಡುವ ಗುರಿ ನಮ್ಮ ಮುಂದೆ ಇತ್ತು. ಶತ್ರುಗಳನ್ನು ಸದೆಬಡಿದು ಭಾರತದ ಧ್ವಜ ಹಾರಿಸಿದೆವು ಎಂದು ಯುದ್ಧದ ಅನುಭವ ಹಂಚಿಕೊಂಡರು.

ಕಾಲೇಜಿನ ನಿರ್ದೇಶಕ ಪ್ರೊ। ವೈ. ವೃಷಭೇಂದ್ರಪ್ಪ ಮಾತನಾಡಿ, ಕ್ಯಾ। ನವೀನ್ ನಾಗಪ್ಪ ಅವರು ಕಾರ್ಗಿಲ್ ಯುದ್ಧದಲ್ಲಿ ಶತ್ರು ದೇಶದೊಂದಿಗೆ ಸೆಣಸಿ ವಿಜಯಮಾಲೆ ಧರಿಸಿದ್ದಾರೆ ಎಂಬುದೇ ಗೌರವ ಮತ್ತು ಹೆಮ್ಮೆಯ ವಿಚಾರ. ದಾವಣಗೆರೆಯವರೇ ಆದ



ದಾವಣಗೆರೆ: ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮದಲ್ಲಿ ಕ್ಯಾ। ನವೀನ್ ನಾಗಪ್ಪ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

> **ಕಾರ್ಗಿಲ್ ಯುದ್ಧಸಂದರ್ಭದಲ್ಲಿ ಪಾಯಿಂಟ್ 4875 ಎಂಬ ಭಾಗದಲ್ಲಿದಾಳಿ ಮಾಡಬೇಕಿತ್ತು. ಆಗ ನಮ್ಮ ತಂಡದೊಂದಿಗೆ ಮುನ್ನುಗ್ಗಿದಾಳಿ ಮಾಡಿದ್ದೆವು. ಈ ವೇಳೆ ಗ್ರೆನೇಡ್ ದಾಳಿಯಿಂದ ನನ್ನ ಕಾಲಿಗೆ ಪೆಟ್ಟಾಗಿತ್ತು. ಆದರೆ ಯುದ್ಧದ ಗೆಲುವಿನ ತುಡಿತವಿತ್ತು. ಕಾಲಿನ ಬಗ್ಗೆ ಚಿಂತಿಸದೆ ಯುದ್ಧ ಮಾಡಿದ್ದೆವು. ಕಾರ್ಗಿಲ್ ಯುದ್ಧದ ದಿನಗಳನ್ನು ನೆನಪಿಸಿಕೊಂಡರೆ ಈ ಕ್ಷಣಕ್ಕೂ ರೋಮಾಂಚಕವಾಗುತ್ತದೆ.**
>
> **● ಕ್ಯಾ। ನವೀನ್ ನಾಗಪ್ಪ**
> ಶೌರ್ಯ ಪದಕ ಪುರಸ್ಕೃತರು

ಕರ್ನಲ್ ರವೀಂದ್ರನಾಥ್, ಎಲೆಬೇತೂರು ಬಸಪ್ಪ ಒಳಗೊಂಡಂತೆ ದಾವಣಗೆರೆಯ ಅನೇಕ ಸೈನಿಕರು ಕಾರ್ಗಿಲ್ ಯುದ್ಧದಲ್ಲಿ ಭಾಗವಹಿಸಿದ್ದರು ಎಂದರು.


ವಿದ್ಯಾರ್ಥಿಗಳು ದೇಶಾಭಿಮಾನ ಬೆಳೆಸಿಕೊಳ್ಳಬೇಕು. ದೇಶಕ್ಕಾಗಿ ಏನಾದರೂ ಸೇವೆ ಮಾಡಬೇಕು. ಸ್ವಾತಂತ್ರ್ಯ ಪೂರ್ವದಲ್ಲೇ ನೇತಾಜಿ ಸುಭಾಶ್ಚಂದ್ರ ಬೋಸ್, ಲಕ್ಷ್ಮಿ ಸೆಗಲ್ ಮುಂತಾದವರು ಅಪ್ರತಿಮ ಹೋರಾಟ ನಡೆಸಿದ್ದು ನಮ್ಮ ಕಣ್ಣ ಮುಂದಿದೆ. ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ನಡೆದ ನಾಲ್ಕು ಯುದ್ಧಗಳ ಸಂದರ್ಭದಲ್ಲಿ ಸಮರ್ಥ ನಾಯಕತ್ವದಿಂದ ಗೆಲುವು ಸಾಧ್ಯವಾಯಿತು ಎಂದು ಸಂತಸ ವ್ಯಕ್ತಪಡಿಸಿದರು.

ಪ್ರಧಾನಿಯಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರಿಯವರು 'ಜೈ ಜವಾನ್ ಜೈ ಕಿಸಾನ್' ಎಂಬ ಘೋಷಣೆ ಮೂಲಕ ದೇಶದ ಸೈನಿಕರಲ್ಲಿ ಆತ್ಮಸ್ಥೈರ್ಯ ತುಂಬಿದರು. ಇಂದಿರಾ ಗಾಂಧಿಯವರು ಸಮರ್ಥವಾಗಿ ಪಾಕಿಸ್ತಾನದ ಎದುರಿನ ಯುದ್ಧ ಎದುರಿಸಿದ ಪರಿಣಾಮ ಗೆಲುವು ನಮ್ಮದಾಯಿತು. ವಾಜಪೇಯಿಯವರು ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಸರಿಯಾದ ನಿರ್ಧಾರ, ಸಮರ್ಥ ನಾಯಕತ್ವ ತೋರಿದ ಪರಿಣಾಮ ಪಾಕಿಸ್ತಾನಕ್ಕೆ ಮಣ್ಣು ಮುಕ್ಕಿಸಲಾಯಿತು ಎಂದು ಸ್ಮರಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ। ಎಚ್. ಅರವಿಂದ್ ಅಧ್ಯಕ್ಷತೆ ವಹಿಸಿದ್ದರು. ಸಂಯೋಜಕ ಡಾ। ಕೆ. ಎಸ್. ಬಸವ ರಾಜನ್, ಸಂಶೋಧನಾ ಮತ್ತು ಅಭಿವೃದ್ಧಿ ಡೀನ್ ಡಾ। ಎ.ಜಿ. ಶಂಕರಮೂರ್ತಿ ಇತರರು ಇದ್ದರು.

# ಛಲದಿಂದ ಕಾರ್ಗಿಲ್ ಯುದ್ಧ ಗೆದ್ದೆವು
# ಕ್ಯಾಪ್ಟನ್ ನವೀನ್ ನಾಗಪ್ಪ ಸ್ಮರಣೆ

Nagaravani 27-03-2023



ದಾ.ನಗರವಾಣಿ ಸುದ್ದಿ

ದಾವಣಗೆರೆ. ಜು.26; ಭಾರತೀಯ ಯೋಧರ ಪರಿಶ್ರಮ ಹಾಗೂ ಛಲವೇ ಕಾರ್ಗಿಲ್ ಯುದ್ಧದಲ್ಲಿ ಅಪ್ರತಿಮ ಗೆಲುವಿಗೆ ಕಾರಣವಾಯಿತು ಎಂದು ಬೆಂಗಳೂರಿನ ಕೇಂದ್ರ ರಕ್ಷಣಾ ಸಚಿವಾಲಯದ ಅಧೀಕ್ಷಕ ಇಂಜಿನಿಯರ್ ಮತ್ತು ಸೇನೆಯ ಶೌರ್ಯ ಪದಕ ಪುರಸ್ಕೃತ ಕ್ಯಾಪ್ಟನ್ ನವೀನ್ ನಾಗಪ್ಪ ಅಣಬೇರು ಹೇಳಿದರು.

ಬುಧವಾರ ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿರುವ ಎಸ್.ಎಸ್ ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಕಾರ್ಗಿಲ್ ವಿಜಯ ದಿವಸ್ ಕಾರ್ಯಕ್ರಮದಲ್ಲಿ ಕಾಲೇಜು ಆಡಳಿತದಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಭಾರತೀಯ ಸೇನೆ ಸೇರಬೇಕೆಂಬ ಮಹತ್ತರ ಅಭಿಲಾಷೆಯಿಂದ ಸರ್ವೀಸ್ ಸೆಲೆಕ್ಷನ್ ಬೋರ್ಡ್‌ಗೆ ಅರ್ಜಿ ಸಲ್ಲಿಸಿ ಕೊನೆಗೂ ಆಯ್ಕೆಯಾದೆ. ಜಮ್ಮು ಮತ್ತು ಕಾಶ್ಮೀರ 13 ನೇ ಬೆಟಾಲಿಯನ್‌ನ ಸೋಪುರ್ ಯುನಿಟ್‌ಗೆ ಸೇರ್ಪಡೆಯಾದ ವೇಳೆ ಕಾರ್ಗಿಲ್ ಯುದ್ಧ ಆರಂಭವಾಗಿತ್ತು ಎಂದರು.

ನಾನು ದೇಶದಗಡಿ ಭಾಗಕ್ಕೆ ತೆರಳಬೇಕಾಗಿತ್ತು. ಈ ವೇಳೆ ಪಾಯಿಂಟ್ 5140 ಬೆಟ್ಟದಲ್ಲಿ ಶತ್ರುಗಳನ್ನು ನಾಶ ಮಾಡುವ ಗುರಿ ನಮ್ಮದಾಗಿತ್ತು. ಈ ವೇಳೆ ಅಪ್ರತಿಮ ಹೋರಾಟ ಮಾಡಿ ಶತ್ರುಗಳನ್ನು ಸದೆ ಬಡಿದು ಭಾರತದ ಧ್ವಜ ಹಾರಿಸಿದ್ದೆವು. ಬಳಿಕ ಪಾಯಿಂಟ್ 4875 ಎಂಬ ಭಾಗದಲ್ಲಿ ದಾಳಿ ಮಾಡಬೇಕಿತ್ತು. ನಮ್ಮ ತಂಡದೊಂದಿಗೆ ಮುನ್ನುಗ್ಗಿ ದಾಳಿ ಮಾಡಿದ್ದೆವು. ಈ ವೇಳೆ ಗ್ರೇನೆಡ್ ದಾಳಿಯಿಂದ ಕಾಲಿಗೆ ಪೆಟ್ಟಾಗಿತ್ತು. ಆದರೆ ನಮಗೆ ಗೆಲುವಿನ ತುಡಿತವಿತ್ತು. ಕಾಲಿನ ಬಗ್ಗೆ ಚಿಂತಿಸದೆ ಯುದ್ಧ ಮಾಡಿದ್ದೆವು ಯುದ್ದದ ಆ ದಿನಗಳನ್ನು ನೆನೆದರೆ ಇಂದಿಗೂ ರೋಮಾಂಚನವಾಗುತ್ತದೆ ಎಂದು ಯುದ್ಧದ ಆ ದಿನಗಳಲ್ಲಿ ಅನುಭವಿಸಿದ ಕ್ಷಣಗಳನ್ನು ಹಂಚಿಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ಅರವಿಂದ್ ವಹಿಸಿದ್ದರು. ಕಾಲೇಜಿನ ನಿರ್ದೇಶಕ ಪ್ರೊ. ವೈ.ವೃಷಭೇಂದ್ರಪ್ಪ ಸಂಯೋಜಕರುಗಳಾದ ಡಾ.ಕೆ.ಬಿ.ಬಸವರಾಜಪ್ಪ, ಸಂಶೋಧನಾ ಮತ್ತು ಅಭಿವೃದ್ಧಿ ಮುಖ್ಯಸ್ಥ ಡಾ.ಎ.ಜಿ.ಶಂಕರಮೂರ್ತಿ ಉಪಸ್ಥಿತರಿದ್ದರು.

Vijayavani 27-07-2023

## ರಕ್ಷಣಾ ಸಚಿವಾಲಯದ ಅಧೀಕ್ಷಕ ಇಂಜಿನಿಯರ್ ನವೀನ್ ನಾಗಪ್ಪ ಹೇಳಿಕೆ | ಕೋಟೆನಾಡು, ಬೆಣ್ಣೆನಗರಿಯಲ್ಲಿ ವಿಜಯೋತ್ಸವ

# ಕಾರ್ಗಿಲ್ ಯುದ್ಧ ಗೆಲುವಿನ ಹಿಂದಿದೆ ನೂರಾರು ಯೋಧರ ತ್ಯಾಗ, ಬಲಿದಾನ

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ಇಪ್ಪತ್ತನಾಲ್ಕು ವರ್ಷಗಳ ಹಿಂದೆ ನಡೆದ ಕಾರ್ಗಿಲ್ ಯುದ್ಧದಲ್ಲಿ ಭಾರತ ಗೆಲುವು ಸಾಧಿಸಲು ದೇಶದ ನೂರಾರು ಯೋಧರು ತ್ಯಾಗ, ಬಲಿದಾನ ಮಾಡಿದ್ದಾರೆ ಎಂದು, ಆ ಯುದ್ಧದಲ್ಲಿ ಹೋರಾಡಿದ್ದ ಕನ್ನಡಿಗ ನವೀನ್ ನಾಗಪ್ಪ ಹೇಳಿದರು.

ಪ್ರಸ್ತುತ ಬೆಂಗಳೂರಿನಲ್ಲಿ ರಕ್ಷಣಾ ಸಚಿವಾಲಯದ ಅಧೀಕ್ಷಕ ಇಂಜಿನಿಯರ್ ಆಗಿರುವ ಅವರು, ನಗರದ ಬಿಐಇಟಿ ಕಾಲೇಜಿನಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಗಿಲ್ ವಿಜಯ ದಿವಸ್ ಕಾರ್ಯಕ್ರಮದಲ್ಲಿ ಮಾತನಾಡಿದರು.

ಆ ಯುದ್ಧದಲ್ಲಿ 527 ಯೋಧರು ಹುತಾತ್ಮರಾದರು, 1300 ಸೈನಿಕರು ಗಾಯಾಳುಗಳಾದರು. ಅವರ ಶೌರ್ಯ, ಪರಾಕ್ರಮದಿಂದಾಗಿ 'ಆಪರೇಷನ್ ವಿಜಯ್' ಯಶಸ್ವಿಯಾಯಿತು ಎಂದು ತಿಳಿಸಿದರು.

ಹಿಮಾಚ್ಛಾದಿತವಾದ ಬೆಟ್ಟ ಪ್ರದೇಶದಲ್ಲಿ 16 ಸಾವಿರ ಅಡಿ ಎತ್ತರದಲ್ಲಿ ನಡೆದ ಈ ಯುದ್ಧದಲ್ಲಿ ಶತ್ರು ಸೈನ್ಯಕ್ಕೆ ತಕ್ಕ ಪಾಠ ಕಲಿಸಲಾಯಿತು. ಪಾಯಿಂಟ್ 5140 ಹಾಗೂ ಪಾಯಿಂಟ್ 4875 ಮೇಲೆ ಭಾರತದ ಬಾವುಟ ಹಾರಿಸಲು ನಡೆದ ಹೋರಾಟವನ್ನು ಎಳೆ ಎಳೆಯಾಗಿ ವಿವರಿಸಿದರು. ಆ ಹೋರಾಟದಲ್ಲಿ 120 ಯೋಧರ ತಂಡವನ್ನು ಮುನ್ನಡೆಸಿದ್ದು, ಶತ್ರುಗಳ ಬಂಕರ್‌ಗಳನ್ನು ನಾಶ ಮಾಡಿದ್ದು, ಗ್ರೆನೇಡ್ ದಾಳಿಗೆ ಒಳಗಾಗಿದ್ದು ಸೇರಿ ತಮ್ಮ ಅನುಭವ ಹಂಚಿಕೊಂಡರು.

ಸೇನೆಗೆ ಆಯ್ಕೆಯಾಗುವುದು ಸುಲಭವಲ್ಲ. ಅವರಲ್ಲಿ ನಾಯಕತ್ವ ಗುಣಗಳಿರಬೇಕು. ಎಂಥದೇ ಸನ್ನಿವೇಶವನ್ನಾದರೂ ಎದುರಿಸಲು ಸಿದ್ಧರಿರಬೇಕು ಎಂದರು.

ಓದಿನಲ್ಲಿ ಅಂಕಗಳನ್ನು ಗಳಿಸುವುದು, ಡಿಸ್ಟಿಂಕ್ಷನ್, ಸಿಜಿಪಿಎ ಒಂದು ಹಂತದ ವರೆಗೆ ಮುಖ್ಯವಾಗುತ್ತವೆ. ಆದರೆ ಅದಕ್ಕಿಂತಲೂ ನಿಮ್ಮ ಮನಃಸ್ಥಿತಿ ಬಹಳ ಪ್ರಮುಖವಾಗುತ್ತದೆ. ದೃಢ ನಿರ್ಧಾರ, ಸ್ಪಷ್ಟತೆಯೊಂದಿಗೆ ಮುನ್ನುಗ್ಗಿದರೆ ಅವಕಾಶಗಳು ಸಾಕಷ್ಟಿವೆ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾಲೇಜಿನ ನಿರ್ದೇಶಕ ಪ್ರೊ. ವೈ.ವೃಷಭೇಂದ್ರಪ್ಪ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ಪ್ರೇರೇಪಿಸುವ ನಾಯಕತ್ವ ಬೇಕಿದೆ ಎಂದು ತಿಳಿಸಿದರು. 1965ರ ಯುದ್ಧದಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ, 1971ರಲ್ಲಿ ಇಂದಿರಾ ಗಾಂಧಿ, 1999ರಲ್ಲಿ ಅಟಲ್ ಬಿಹಾರಿ ವಾಜಪೇಯಿ ನಾಯಕತ್ವ ನೀಡಿದರು ಎಂದು ಸ್ಮರಿಸಿದರು. ಮಣಿಪುರ ಘಟನೆಯ ಬಗ್ಗೆ ಪ್ರಸ್ತಾಪಿಸಿ, ದೇಶವನ್ನು ಅಭದ್ರಗೊಳಿಸುವ ಪ್ರಯತ್ನಗಳು ನಡೆದಿದ್ದು ಅದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಹೇಳಿದರು. ಪ್ರಾಚಾರ್ಯ ಎಚ್.ಬಿ. ಅರವಿಂದ್, ಡಾ.ಕೆ.ಎಸ್. ಬಸವರಾಜಪ್ಪ, ಮಲ್ಲಿಕಾರ್ಜುನ್, ಎ.ಜಿ. ಶಂಕರಮೂರ್ತಿ ಇದ್ದರು.



ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿ ಬುಧವಾರ ಕಾರ್ಗಿಲ್ ವಿಜಯ ದಿವಸ್ ಕಾರ್ಯಕ್ರಮವನ್ನು ರಕ್ಷಣಾ ಸಚಿವಾಲಯದ ಅಧೀಕ್ಷಕ ಇಂಜಿನಿಯರ್ ನವೀನ್ ನಾಗಪ್ಪ ಉದ್ಘಾಟಿಸಿದರು. ಪ್ರೊ. ವೈ.ವೃಷಭೇಂದ್ರಪ್ಪ, ಎಚ್.ಬಿ. ಅರವಿಂದ್, ಮಲ್ಲಿಕಾರ್ಜುನ್, ಎ.ಜಿ. ಶಂಕರಮೂರ್ತಿ ಇದ್ದರು.